ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 66-73
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ನೆಲಮಂಗಲ ತಾಲೂಕಿನ ಶೈವ ಮಠಗಳು: ಒಂದು ಐತಿಹಾಸಿಕ ಅಧ್ಯಯನ

**ಡಾ. ಸುಷ್ಮಾ ಹೆಚ್**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಮಹಿಳಾ ಕಾಲೇಜು, ದೊಡ್ಡಬಳ್ಳಾಪುರ

**Abstract:**
*ಈ ಸಂಶೋಧನಾ ಲೇಖನವು ನೆಲಮಂಗಲ ತಾಲೂಕಿನ ಶೈವ ಮಠಗಳ ಐತಿಹಾಸಿಕ ಹಿನ್ನೆಲೆ, ಧಾರ್ಮಿಕ ಮಹತ್ವ ಮತ್ತು ಸಾಮಾಜಿಕ ಕೊಡುಗೆಗಳನ್ನು ಅಧ್ಯಯನ ಮಾಡುತ್ತದೆ. ಶೈವ ಮಠಗಳ ಸ್ಥಾಪನೆ, ಬೆಳವಣಿಗೆ, ಧಾರ್ಮಿಕ ಪರಂಪರೆ ಹಾಗೂ ಸ್ಥಳೀಯ ಸಮಾಜದೊಂದಿಗೆ ಅವು ಹೊಂದಿರುವ ಸಂಬಂಧಗಳನ್ನು ಇಲ್ಲಿ ಪರಿಶೀಲಿಸಲಾಗಿದೆ. ಮಠಗಳ ಧಾರ್ಮಿಕ ಆಚರಣೆಗಳು, ಶಿಕ್ಷಣ, ದಾಸೋಹ, ಸಾಮಾಜಿಕ ಸೇವೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಪಾತ್ರವನ್ನು ವಿಶ್ಲೇಷಿಸಲಾಗಿದೆ. ಶೈವ ಮಠಗಳು ಗ್ರಾಮೀಣ ಜನಜೀವನದಲ್ಲಿ ಧಾರ್ಮಿಕ ನಂಬಿಕೆಗಳು, ಸಾಮಾಜಿಕ ಒಗ್ಗಟ್ಟು ಮತ್ತು ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಗೆ ನೀಡಿರುವ ಕೊಡುಗೆಯನ್ನು ಗುರುತಿಸಲಾಗಿದೆ. ಈ ಅಧ್ಯಯನವು ನೆಲಮಂಗಲ ತಾಲೂಕಿನ ಶೈವ ಮಠಗಳ ಐತಿಹಾಸಿಕ ಮಹತ್ವವನ್ನು ತಿಳಿಸುತ್ತದೆ.*

**Keywords:** *ನೆಲಮಂಗಲ ತಾಲೂಕು, ಶೈವ ಮಠಗಳು, ಐತಿಹಾಸಿಕ ಅಧ್ಯಯನ, ಧಾರ್ಮಿಕ ಪರಂಪರೆ, ಸಾಮಾಜಿಕ ಕೊಡುಗೆ.*

## ಪೀಠಿಕೆ

ಮಠ ಎಂಬುದು ಸಂಸ್ಕೃತ ಪದವಾಗಿದ್ದು ಶೈಕ್ಷಣಿಕ ಸಂಸ್ಥೆ, ಗುರುಕುಲ ಎಂಬ ಅರ್ಥ ನೀಡುತ್ತದೆ. "ಮಠ" ಪರಿಕಲ್ಪನೆಯು ಭಾರತದಾದ್ಯಂತ 5–6ನೇ ಶತಮಾನದ ನಂತರ ಕಂಡುಬರುತ್ತದೆ. ಹಿಂದೂ ತತ್ವಶಾಸ್ತ್ರಗಳ ಪ್ರಕಾರ ಮಠಗಳು ಕೇವಲ ಶೈಕ್ಷಣಿಕ ಸಂಸ್ಥೆಗಳಷ್ಟೇ ಆಗಿರದೆ ಧಾರ್ಮಿಕ ಮತ್ತು ಸಾಮಾಜಿಕ ಕೇಂದ್ರಗಳಾಗಿಯೂ ಕಾರ್ಯನಿರ್ವಹಿಸಿವೆ. ಮಠಗಳು ಸಮುದಾಯಗಳನ್ನು ನಿಯಂತ್ರಿಸುವ, ಹಬ್ಬ–ಹರಿದಿನಗಳನ್ನು ಆಚರಿಸುವ, ಸಾಹಿತ್ಯಿಕ ಬೆಳವಣಿಗೆಗಳಿಗೆ ಸಾಕ್ಷಿಯಾಗುವಂತಹ ಕಾರ್ಯಗಳನ್ನು ಮಾಡುತ್ತಾ ಬಂದಿವೆ. ನೆಲಮಂಗಲ ತಾಲೂಕಿನ ಮಠ ಪರಂಪರೆಯು ದಕ್ಷಿಣ ಕಾಶಿ ಎಂದು ಕರೆಸಿಕೊಳ್ಳುವ ಶಿವಗಂಗೆಯಿಂದಲೇ ಆರಂಭವಾಗಿದ್ದು ಶೈವರ ಕೇಂದ್ರವಾದ ಇಲ್ಲಿ ಶ್ರೀ ರೇವಣ್ಣಸಿದ್ದರು, ತೋಂಟದ ಶ್ರೀಸಿದ್ಧಲಿಂಗೇಶ್ವರರು, ಶ್ರೀಗೋಸಲ ಚನ್ನಬಸವೇಶ್ವರ ರಂತಹ ಅನೇಕ ಗುರುಗಳು ನೆಲೆನಿಂತು ಮಠಗಳ ಬೆಳವಣಿಗೆಗೆ ಕಾರಣಕರ್ತರಾಗಿದ್ದಾರೆ. ನೆಲಮಂಗಲದಲ್ಲಿ ನೂರ ಹತ್ತು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ.

### ಪವಾಡ ಬಸವಣ್ಣದೇವರ ಮಠ, ನೆಲಮಂಗಲ

15ನೇ ಶತಮಾನದಲ್ಲಿ ವೀರಶೈವ ತತ್ವಗಳನ್ನು ಪ್ರಚಾರ ಮಾಡಲು ನಡೆದ ಧಾರ್ಮಿಕ ಆಂದೋಲನದ ರೂವಾರಿ ತೋಂಟದ ಶ್ರೀಸಿದ್ಧಲಿಂಗೇಶ್ವರರೇ ಈ ಮಠದ ಪರಂಪರೆಗೆ

**Please cite this article as:** ಸುಷ್ಮಾ, ಹೆಚ್. (2026). ನೆಲಮಂಗಲ ತಾಲೂಕಿನ ಶೈವ ಮಠಗಳು: ಒಂದು ಐತಿಹಾಸಿಕ ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(3), 66–73

ಕಾರಣಕರ್ತರು ಎಂದು ತಿಳಿದುಬರುತ್ತದೆ.[1] ಈ ಮಠದ ಮೂಲ ಪುರುಷರಾದ "ಬಸವಣ್ಣ ದೇವರು ಸಿದ್ದಲಿಂಗೇಶ್ವರರ 701 ಜನ ಶಿಷ್ಯರಲೊಬ್ಬರು. ಇವರ ಪರಿಶುದ್ಧ ಜೀವನದ ಅನೇಕ ಘಟನೆಗಳು ಲೋಕಕ್ಕೆ ಪವಾಡದಂತೆ ಕಾಣುತ್ತಿದ್ದರಿಂದ ಇವರನ್ನು ಪವಾಡ ಬಸವಣ್ಣದೇವರೆಂದೂ ಮಠಕ್ಕೆ ಪವಾಡ ಬಸವಣ್ಣದೇವರ ಮಠ ಎಂದು ಹೆಸರು ಬಂದಿದೆ. ಬೆಂಗಳೂರು–ಪೂನಾ ಹೆದ್ದಾರಿಗೆ, ದಕ್ಷಿಣ ದಿಕ್ಕಿಗೆ ನೆಲಮಂಗಲದ ಆಗ್ನೇಯ ದಿಕ್ಕಿನಲ್ಲಿರುವ ಈ ಮಠ ನೆಲಮಂಗಲದ ವೀರಶೈವರಿಗೆ ಪ್ರಮುಖ ಧಾರ್ಮಿಕ ಕೇಂದ್ರವಾಗಿದೆ. ಮರುಳಸಿದ್ಧ ಸ್ವಾಮಿಗಳು, ಗುರುಸಿದ್ಧಸ್ವಾಮಿಗಳು, ಇಮ್ಮಡಿ ಮರುಳ ಸಿದ್ಧಸ್ವಾಮಿಗಳು ಈ ಮಠದ ಪ್ರಮುಖ ಶಿವಯೋಗಿಗಳು. 1971ರ ಸೆಪ್ಟೆಂಬರ್ 29ರಂದು ಶ್ರೀ ಸದಾಶಿವಸ್ವಾಮಿಗಳವರು ಮಠದ ಸ್ವಾಮಿಗಳಾಗಿ ಅಧಿಕಾರವಹಿಸಿಕೊಂಡ ನಂತರ ಮಠವು ಅಭಿವೃದ್ಧಿಯಾಯಿತು. ತಮ್ಮ ಅತ್ಯದ್ಭುತವಾದ ಕ್ರಿಯಾಯೋಗ, ಲಿಂಗನಿಷ್ಠೆ, ಸಮಾಜ ಸೇವಾಕಾಂಕ್ಷೆ, ನಿಷ್ಕಪಟ ನಡೆನುಡಿ, ಗುರುಲಿಂಗ ಜಂಗಮ ಸೇವಾ ಧುರೀಣತೆ, ತ್ರಿವಿಧ ದಾಸೋಹಂಬಾವಗಳಿಂದ ಮಠ ಕಂಗೊಳಿಸುವಂತೆ ಮಾಡಿದರು. ಮಠದ ಆವರಣದಲ್ಲೇ ಒಂದು ಸಂಸ್ಕೃತ ಪಾಠಶಾಲೆ, ಬಸವೇಶ್ವರ ಪ್ರಾಥಮಿಕ ಶಾಲೆ, ಮಹಾಲಿಂಗೇಶ್ವರ ಉಚಿತ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದರು. ಇದಲ್ಲದೆ ಹುಸ್ಕೂರಿನಲ್ಲಿ ಬಸವೇಶ್ವರ ಮಹಿಳಾ ಪದವಿಪೂರ್ವ ಕಾಲೇಜನ್ನು ಆರಂಭಿಸಲಾಯಿತು. ಇಂದು ಶ್ರೀ ಬಸವೇಶ್ವರ ಸಮೂಹ ವಿದ್ಯಾಸಂಸ್ಥೆಗಳು ಎಂಬ ಸಂಸ್ಥೆಯ ಅಡಿಯಲ್ಲಿ ಮಠ 18 ವಿದ್ಯಾಕೇಂದ್ರಗಳನ್ನು ನಡೆಸುತ್ತಿದೆ. 1986ರಲ್ಲಿ ಅಖಿಲ ಭಾರತ ವೀರಶೈವ ಮಹಾ ಸಮ್ಮೇಳನವೂ ಇಲ್ಲಿ ನಡೆದಿದೆ.

ಈ ಮಠದಲ್ಲಿ ಬಸವ ಜಯಂತಿ ಆಚರಣೆ, ಕಾರ್ತಿಕ ಮಾಸದ ಪೂಜೆಗಳು, ಶಿವರಾತ್ರಿ ಜಾಗರಣೆ, ಪ್ರತಿ ದಿನ ಅನ್ನ ದಾಸೋಹ, ಅಕ್ಕನ ಬಳಗ ಎಂಬ ಮಹಿಳಾ ಸಂಘಟನೆಯ ಮೂಲಕ ಪ್ರತೀ ಶುಕ್ರವಾರ ಪ್ರವಚನ ಮತ್ತು ಭಜನೆಯನ್ನು ಮಠದಲ್ಲಿ ಏರ್ಪಡಿಸಲಾಗುತ್ತದೆ. ಪವಾಡ ಶ್ರೀ ಜ್ಯೋತಿ ಎಂಬ ಮಾಸ ಪತ್ರಿಕೆಯನ್ನೂ ಹೊರತರಲಾಗುತ್ತಿದ್ದ ಪ್ರಸ್ತುತ ಶ್ರೀ.ಮ.ನಿ.ಪ್ರ.ಸ್ವ ಶ್ರೀ.ಶ್ರೀ.ಸಿದ್ದಲಿಂಗ ಮಹಾಸ್ವಾಮಿಗಳು ಮಠದ ಅಧ್ಯಕ್ಷರಾಗಿದ್ದಾರೆ.

**ಹೊಸಮಠ, ನೆಲಮಂಗಲ**

ನೆಲಮಂಗಲ ಪಟ್ಟಣದಲ್ಲಿ ಅಸ್ಥಿತ್ವದಲ್ಲಿರುವ ಹೊಸಮಠವು ವಿರಕ್ತ ಸಂಪ್ರದಾಯದ ಕೆಂಪಿನ ಸಮಯಕ್ಕೆ ಸೇರಿದ ಯಡಿಯೂರು ಸಿದ್ದಲಿಂಗೇಶ್ವರರ ಧಾರ್ಮಿಕ ಆಂದೋಲನದ ನಂತರ ಬೆಳವಣಿಗೆಯಾಗಿದೆ.[2] ಇದು ಬೆಂಗಳೂರು ನಗರದ ಬೇಲಿಮಠದ ಶಾಖಾಮಠವಾಗಿದೆ. 1994ರಲ್ಲಿ ಶ್ರೀನಂಜುಂಡಸ್ವಾಮಿಗಳು ಲಿಂಗೈಕರಾದ ನಂತರ ಮಠದಲ್ಲಿ ಮಠಾಧೀಶರು ಯಾರೂ ಇಲ್ಲ. ಬೆಂಗಳೂರಿನ ಬೇಲಿಮಠದ ಶ್ರೀಶಿವರುದ್ರ ಸ್ವಾಮಿಗಳೇ ಮಠದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ.

**ಚೌಕಿಮಠ, ನೆಲಮಂಗಲ**

ನೆಲಮಂಗಲ ಪಟ್ಟಣದಲ್ಲಿ ಇರುವ ಈ ಮಠವು ವಿರಕ್ತಪರಂಪರೆಯ ಮಠವಾಗಿದ್ದು, ಹಿಂದೆ ನೆಲಮಂಗಲದ ಹೊರಗಿನ ಕೆರೆಯ ದಡದಲ್ಲಿ ಸ್ಥಾಪನೆಯಾಗಿತ್ತು. ಇತ್ತೀಚಿಗೆ ಪಟ್ಟಣದ ಒಳಗೆ ಸ್ಥಳಾಂತರಿಸಲಾಗಿದೆ. ಮಠದ ಆವರಣದಲ್ಲಿ ಶ್ರೀ ಸಿದ್ಧಲಿಂಗಸ್ವಾಮಿಗಳ ಗದ್ದುಗೆ ಇದ್ದು ಪ್ರತಿನಿತ್ಯ ಪೂಜೆ ನಡೆಯುತ್ತದೆ.

**ಮಹಂತಿ ಮಠ, ನೆಲಮಂಗಲ**

ನೆಲಮಂಗಲ ಪಟ್ಟಣದ ಮಹಂತಿ ಮಠವು ಅಡೇಪೇಟೆಯಲ್ಲಿದ್ದು, ಉಜ್ಜಯಿನಿ ಪೀಠದ ಶಾಖಾ

[1] ಬಸವ ಪ್ರಭೆ(ಸ್ಮರಣ ಸಂಚಿಕೆ), ಶ್ರೀ ಪವಾಡ ಬಸವಣ್ಣದೇವರ ಮಠ, ನೆಲಮಂಗಲ, 1998, ಪು.5

[2] ಚಂದ್ರಶೇಖರ ನಾರಾಯಣಪುರ, ಕರ್ನಾಟಕದ ವೀರಶೈವ ಮಠಗಳು, ಸಂ–1, ಗೆಳೆಯ ಪ್ರಕಾಶನ, ಚಿಕ್ಕಮಗಳೂರು, 2002, ಪು.920

ಮಠವಾಗಿದೆ. ಉಜ್ಜಯಿನಿ ಪೀಠದ ತೊಂಭತ್ತೆರಡನೆಯ ಜಗದ್ಗುರುಗಳಾದ ಶ್ರೀ ಮರುಳಸಿದ್ದ ಶಿವಾಚಾರ್ಯ ಸ್ವಾಮಿಗಳು ಈ ಮಠದ ಸ್ಥಾಪಕರೆಂದು ಹೇಳಲಾಗುತ್ತದೆ. ಈ ಮಠದ ಪರಂಪರೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಲಭ್ಯವಿರುವಷ್ಟು ಆಧಾರಗಳ ಮೇಲೆ ಮಠದ ಪರಂಪರೆಯನ್ನು ಹೀಗೆ ಗುರುತಿಸಬಹುದು. ಷ.ಬ್ರ.ಶ್ರೀ.ಚಂದ್ರಮೌಳೇಶ್ವರ ಸ್ವಾಮಿಗಳು, ಷ.ಬ್ರ.ಶ್ರೀ.ಗುರುಸಿದ್ದಸ್ವಾಮಿಗಳು, ಷ.ಬ್ರ.ಶ್ರೀ ನಂಜೇದೇವರು ಷ.ಬ್ರ.ಶ್ರೀ ಜಯದೇವರು ಮತ್ತು ಷ.ಬ.ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು.[3] 1988ರಲ್ಲಿ ಹದಿನೇಳು ವರ್ಷದ ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡಲಾಯಿತು. ಇವರ ಜೀವಂತ ಸಮಾಧಿಯ ಮೇಲೆ ಗದ್ದುಗೆಯನ್ನು ನಿರ್ಮಿಸಲಾಗಿದೆ. ಮೂಲ ಮಠವು ಕಲ್ಲಿನ ಮಠವಾಗಿದ್ದು ಸರಳವಾದ ವಾಸ್ತುವನ್ನು ಹೊಂದಿದ್ದು ಈಗ ಜೀರ್ಣೋದ್ಧಾರ ನಡೆಯುತ್ತಿದೆ. ಉಳಿದ ಸ್ವಾಮಿಗಳ ಗದ್ದುಗೆಗಳು ಇಲ್ಲ. ಇಲ್ಲಿ ಪ್ರತಿ ಅಮಾವಾಸೆಯಲ್ಲಿ ಚಂದ್ರಮೌಳೇಶ್ವರ ಶಿವಾಚಾರ್ಯಸ್ವಾಮಿಗಳ ಗದ್ದುಗೆಗೆ ರುದ್ರಾಭಿಷೇಕ ನಡೆಸಲಾಗುತ್ತದೆ. ಶಿವರಾತ್ರಿ, ಕಾರ್ತಿಕ ಮಾಸಗಳಲ್ಲಿ ವಿಶೇಷ ಆಚರಣೆಗಳು ನಡೆಯುತ್ತವೆ. ಮಠಕ್ಕೆ ಸೇರಿದ 16ನೇ ಶತಮಾನದ ರುದ್ರದೇವ ದೇವಾಲಯವು ಇಲ್ಲಿದೆ.

**ಕವಾಡಿ ಮಠ, ನೆಲಮಂಗಲ**

ಮೇಗಣಗವಿ ಮಠದ ಶಾಖಾಮಠವಾದ ಈ ಮಠಕ್ಕೆ ಯಾವುದೇ ಗುರು ಪರಂಪರೆ ಇಲ್ಲ. ಕ್ರಿ.ಶ.1875ರಲ್ಲಿ ಶ್ರೀ ಕವಾಡಿ ರುದ್ರದೇವ ದೇವಾಲಯವು ಅಫಘಾನಿ ರುದ್ರಪ್ಪನವರಿಂದ ಸ್ಥಾಪನೆಯಾದಾಗ ಮಠವೂ ಸ್ಥಾಪನೆಯಾಗಿದೆ.[4] ಕವಾಡಿಗಳು, ವೀರಶೈವರಲ್ಲಿ ಹಾಲು ಮಾರುವ ವೃತ್ತಿಯವರಾಗಿದ್ದು, ಮೂಲತಃ ಮಹಾರಾಷ್ಟ್ರ, ಉತ್ತರ ಕರ್ನಾಟಕದ ಕಡೆ ಕಂಡುಬರುವ ಸಮುದಾಯವಾಗಿದೆ. ಈ ಮಠವೂ ಸಹ ವೀರಶೈವದಲ್ಲಿ ಪ್ರಮುಖವಾಗಿದ್ದು, ಪ್ರತೀ ಅಮಾವಾಸೆಯಲ್ಲಿ ಸತ್‌ಸಂಘ, ಶ್ರಾವಣಮಾಸದ ಮೌನ ಪ್ರವಚನ, ಪಾರಾಯಣದಂತ ಆಚರಣೆಗಳು ನಡೆಯುತ್ತವೆ.

**ಕಾಲುವೆ ಮಠ, ತ್ಯಾಮಗೊಂಡ್ಲು**

ನೆಲಮಂಗಲ ತಾಲೂಕಿನ ತ್ಯಾಮಗೊಂಡ್ಲು ತಾಲೂಕು ಕೇಂದ್ರದಿಂದ ವಾಯುವ್ಯಕ್ಕೆ 30 ಕಿ.ಮೀ. ದೂರದಲ್ಲಿದೆ. ತ್ಯಾಮಗೊಂಡ್ಲು ಗ್ರಾಮದಲ್ಲಿ ಮುರುಘಾ ಸಮಯದ ವಿರಕ್ತ ಸಂಪ್ರದಾಯದ ಶ್ರೀ ಕಾಲುವೆ ಮಠವು ಶ್ರೀ ಶಿವರುದ್ರಸ್ವಾಮಿಗಳೆಂಬ ಶರಣರಿಂದ 300 ವರ್ಷಗಳ ಹಿಂದೆ ಸ್ಥಾಪನೆಯಾಯಿತು ಎನ್ನಲಾಗಿದೆ. ಯಡಿಯೂರು ಶ್ರೀ ಸಿದ್ಧಲಿಂಗ ಯತಿಗಳ ಪ್ರಭಾವಕ್ಕೆ ಒಳಗಾಗಿ ಈ ಗ್ರಾಮದಲ್ಲಿ ಮಠವನ್ನು ಸ್ಥಾಪಿಸಿ ಇಲ್ಲೇ ನೆಲೆಗೊಂಡಿದ್ದಾರೆ.

ಈ ಮಠವು ಕನಕಪುರ ತಾಲೂಕಿನ ಮರಳೆಗವಿಮಠದ ಶಾಖಾಮಠವಾಗಿದೆ. ಮಠದ ಮುಂಭಾಗದಲ್ಲಿ ನೀರಿನ ಕಾಲುವೆ ಇರುವುದರಿಂದ ರೂಢಿಗತವಾಗಿ ಕಾಲುವೆ ಮಠ ಎಂಬ ಹೆಸರು ಬಂದಿದೆ. ಶಿವರುದ್ರಸ್ವಾಮಿಗಳು ತಮ್ಮ ಜೀವಿತಾವಧಿಯಲ್ಲಿಯೇ ಉತ್ತರಾಧಿಕಾರಿಯನ್ನು ನೇಮಿಸದೆ ಲಿಂಗೈಕ್ಯರಾದ ಕಾರಣ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿಯಿತು. ಶಿವರುದ್ರಸ್ವಾಮಿಗಳ ಗದ್ದುಗೆಯನ್ನು ನಿರ್ಮಿಸಿ ಪೂಜಿಸಲಾಗುತ್ತಿತ್ತು. ಖಾಲಿ ಉಳಿದ ಮಠದ ಪೀಠಕ್ಕೆ ಉತ್ತರಾಧಿಕಾರಿ ಬೇಕೆಂದು ಊರಿನ ಜನತೆ ಇಲ್ಲಿಗೆ ಸಮೀಪದ ದೊಡ್ಡಬೆಲೆ ಗ್ರಾಮದ ದೊಡ್ಡಮಠದ ಶ್ರೀ ರುದ್ರಮುನಿ ಸ್ವಾಮಿಗಳಿಗೆ ಮಠವನ್ನು ವಹಿಸಿಕೊಡಲಾಯಿತು. ನಂತರ ಮಠವು ಅಭಿವೃದ್ಧಿಯಾಯಿತು. ಇಲ್ಲಿ ಗದ್ದುಗೆಗೆ ನಿತ್ಯಪೂಜೆ, ಅಮಾವಾಸೆ ಹುಣ್ಣಿಮೆಗಳಲ್ಲಿ ರುದ್ರಾಭಿಷೇಕ,

[3] ಮೇಲಿನದೇ, ಪು.920

[4] ಸಂದರ್ಶನ: ಗಂಗರಾಜು, ಟ್ರಸ್ಟಿ, ಕವಾಡಿ ಮಠ, ನೆಲಮಂಗಲ, ದಿನಾಂಕ 15–05–2016

ವರ್ಷಕ್ಕೊಮ್ಮೆ ಕರ್ತೃಗುರುಗಳ ಆರಾಧನೆಯು ನಡೆಯುತ್ತದೆ.

**ದೊಡ್ಡಬೆಲೆ ಮಠ, ದೊಡ್ಡಬೆಲೆ ಗ್ರಾಮ**

ದೊಡ್ಡಬೆಲೆ ಗ್ರಾಮದ ದೊಡ್ಡಮಠವಾದ ಇದು ಊರಿನ ಹೊರಭಾಗದಲ್ಲಿ ಅಸ್ಥಿತ್ವದಲ್ಲಿದೆ. ಸುಮಾರು 300 ವರ್ಷಗಳ ಹಿಂದೆ ಶ್ರೀ ರುದ್ರಮುನಿ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದು ಯಡಿಯೂರು ಸಿದ್ದಲಿಂಗೇಶ್ವರರ ಪ್ರಭಾವಕ್ಕೆ ಒಳಗಾಗಿ ಬೆಳೆದ ಮಠ ಇದಾಗಿದೆ. ದೊಡ್ಡಮಠದ ಪರಂಪರೆಯಲ್ಲಿ ಕರ್ತೃಗುರುಗಳಾದ ಶ್ರೀ ರುದ್ರಮುನಿ ಸ್ವಾಮಿಗಳ ಹೆಸರಿನಲ್ಲೇ ಮುಂದಿನ ಗುರುಗಳ ಪಟ್ಟಾಧಿಕಾರವು ನಡೆದಿದ್ದು ಗುರುಗಳ ಹೆಸರು ಗುರುತು ಹಚ್ಚಲು ಕಷ್ಟವಾಗಿದೆ. ಇಲ್ಲಿನ ಶ್ರೀ ರುದ್ರಮುನಿ ಸ್ವಾಮಿಗಳು ಕಾಲುವೆಮಠ ಮತ್ತು ದೊಡ್ಡಮಠಗಳೆರಡರ ಉಸ್ತುವಾರಿಯನ್ನೂ ನೋಡಿಕೊಳ್ಳುತ್ತಿದ್ದಾರೆ.

**ಶಿವಗಂಗೆಯ ಶೈವ ಮಠಗಳು**

ಶಿವಗಂಗೆ ಪ್ರಸಿದ್ಧ ವೀರಶೈವ ಕ್ಷೇತ್ರವಾಗಿದ್ದು, ಶಿವಗಂಗೆಯ ಪರಿಸರದಲ್ಲಿ 64 ಮಠಗಳು ಇದ್ದವೆಂದು ಹೇಳಲಾಗುತ್ತದೆ. ಬಿ.ಎಲ್.ರೈಸ್ ಮತ್ತು ಹಯವದನರಾಯರ ಗೆಜೆಟಿಯರ್‌ನಲ್ಲಿ 64 ಮಠಗಳಿದ್ದವೆಂಬ ಹೇಳಿಕೆಯನ್ನು ಪುಷ್ಟೀಕರಿಸಿದ್ದಾರೆ. ಇಂದು ಅಸ್ಥಿತ್ವ ಉಳಿಸಿಕೊಂಡಿರುವುದು ಬೆರಳೆಣಿಕೆಯಷ್ಟು ಮಠಗಳು ಮಾತ್ರ. ಡಾ.ಬಿ. ನಂಜುಂಡಸ್ವಾಮಿಯವರು ತಮ್ಮ ಲೇಖನದಲ್ಲಿ 52 ಮಠಗಳನ್ನು ಗುರುತಿಸಿದ್ದಾರೆ.[5]

**ಮೇಗಣ ಗವಿಮಠ**

ಇಂದಿನವರೆಗೂ ಅಸ್ಥಿತ್ವ ಉಳಿಸಿಕೊಂಡಿರುವ ಏಕೈಕ ಮಠವೆಂದರೆ ಶ್ರೀರಂಭಾಪುರಿ ವೀರ ಸಿಂಹಾಸನದ ಶಾಖಾಮಠವಾದ ಮೇಲಣಗವಿ ವೀರಸಿಂಹಾಸನ ಮಠ. ಪಂಚಾಚಾರ್ಯದಲ್ಲಿ ಒಬ್ಬರಾದ ರೇಣುಕಾಚಾರ್ಯರ ಮಗ ರುದ್ರಮುನಿಗಳು ಕಲ್ಯಾಣದಿಂದ ಇಲ್ಲಿಗೆ ಒಂದು ಮಠವನ್ನು ಸ್ಥಾಪಿಸಿದ್ದಾರೆ. ಇಂದಿಗೂ ಇಲ್ಲಿ ರುದ್ರಮುನೀಶ್ವರ ಗವಿಯನ್ನು ಕಾಣಬಹುದು. ಗುಹಾಮಠದ ಬಳಿ ಇರುವ ಒಳಕಲ್ಲು ತೀರ್ಥ ಸ್ಥಾಪಿಸಿದವರು ಇವರೇ ಎಂಬ ದಂತಕಥೆ ಚಾಲ್ತಿಯಲ್ಲಿದೆ. 1984ರಲ್ಲಿ ಈ ಮಠದ ವತಿಯಿಂದ ಪ್ರಕಟವಾದ ಸ್ಮರಣ ಸಂಚಿಕೆಯಲ್ಲಿ ಶಿವಗಂಗೆಯ ಶ್ರೀ.ಎಸ್.ಪಿ.ಯಡಿಯೂರಪ್ಪನವರು ತಿಳಿಸಿರುವಂತೆ ಶ್ರೀಜಗದ್ಗುರು ರೇವಣಸಿದ್ದರಿಂದ ಈ ಮಠ ಸ್ಥಾಪನೆಯಾಗಿದ್ದು, ಶ್ರೀರುದ್ರಮುನೀಶ್ವರರಿಗೆ ಶಿವದೀಕ್ಷೆ ಇತ್ತರು ಎಂದು ತಿಳಿಸಿದ್ದು 17 ಮುನಿಗಳ ಗುರುಪರಂಪರೆಯ ಪಟ್ಟಿಯನ್ನು ನೀಡಿದ್ದಾರೆ. ಶ್ರೀ ರೇವಣಸಿದ್ದೇಶ್ವರರು ಇದ್ದ ಸ್ಥಳಗಳಲೆಲ್ಲಾ ದಾಸೋಹ ನಡೆಯುತ್ತಿದ್ದು ಇಲ್ಲಿಯೂ ಪ್ರತಿನಿತ್ಯ ದಾಸೋಹ ಆಚರಣೆಯಲ್ಲಿದೆ. ಕಲ್ಯಾಣಕ್ರಾಂತಿಯ ನಂತರ ದಕ್ಷಿಣದ ಕಡೆ ಬಂದ 12,000 ಜಂಗಮರಿಗೆ ಮಠದಲ್ಲಿ ಗಣಪರ್ವ ಮಾಡಿ ಶರಣರನ್ನು ಗೌರಿಸಲಾಯಿತು.[6] ಇದೇ ಪರಂಪರೆ ಇಂದಿಗೂ ಮುಂದುವರೆದಿದೆ. ಹೊಯ್ಸಳರ ಕಾಲದಿಂದಲೂ ಈ ಮಠ ರಾಜ ಪೋಷಣೆಯನ್ನು ಪಡೆದಿದ್ದು, ಶಾಸನಗಳು ಸಾಹಿತ್ಯಿಕ ಕೃತಿಗಳು ಇದರ ಮಾಹಿತಿ ನೀಡುತ್ತವೆ. ರಾಜನಲ್ಲದೆ, ಅಧಿಕಾರಿಗಳು, ಜನಸಾಮಾನ್ಯರು ಇಲ್ಲಿಗೆ ಕಾಣಿಕೆಗಳನ್ನು ಸಲ್ಲಿಸಿದ್ದಾರೆ. ಕ್ರಿ.ಶ.1546ರ ವೀರನರಸಿಂಗ ದೇವರ ಶಾಸನದಲ್ಲಿ ಗಂಡ್ರಗೋಳಿ ದಳವಾಯಿ ಸೊಂಣಪ್ಪ ನಾಯಕರ ಮಕ್ಕಳು ಬೈರಪ್ಪನಾಯಕರು ಶಿವಗಂಗೆಯ ಮೇಗಣಗವಿಯ ಸಿಂಹಾಸನದ ಮಲೆಯ ಕಾಂತದೇವರಿಗೆ ಶಿಷ್ಯಪರಂಪರೆಯಾಗಿ ಹುಲುಕುಡಿನೊಳಗಣ ಹಣಬೆಯ ಸೀಮೆಗೆ ಸಲುವ ಶಿಂಪಾಡಿ ಪುರದ ಸೀಮೆಯೊಳಗಣ ಭೂಮಿಯನ್ನು

[5] ಶಿವಗಂಗಾ ಸಿರಿ(ಸ್ಮರಣ ಸಂಚಿಕೆ), ಶಿವಗಂಗಾ ಕ್ಷೇತ್ರೋತ್ಸವ ಸಮಿತಿ, ಮೇಗಣ ಗವಿ ಮಠ, ಶಿವಗಂಗೆ, ಪು.62–63

[6] ಚಂದ್ರಶೇಖರ ನಾರಾಯಣಪುರ, ಕರ್ನಾಟಕದ ವೀರಶೈವ ಮಠಗಳು, ಸಂ–1, ಗೆಳೆಯ ಪ್ರಕಾಶನ, ಚಿಕ್ಕಮಗಳೂರು, 2002, ಪು.955

ನೀರಿನ ಆಸರೆಯ ಒಂದು ಕುಂಟೆಯನ್ನು ಮಠಕ್ಕೆ ದಾನವಾಗಿ ನೀಡಿದ್ದಾರೆ.[7]

ಕೆಳದಿಯ ವೆಂಕಟಪ್ಪನಾಯಕರು ತಮ್ಮ ಪತ್ನಿಗೆ ಒಳಿತಾಗಲೆಂದು ಈ ಮಠಕ್ಕೆ ದಾನ ನೀಡಿದ ಬಗ್ಗೆ ಕ್ರಿ.ಶ.1616ರ ಶಾಸನ ಮಾಹಿತಿ ನೀಡುತ್ತದೆ.[8] ಇವರ ಪುತ್ರರಾದ ಭದ್ರಪ್ಪನಾಯಕರ ಪುತ್ರ ವೀರಭದ್ರನಾಯಕರು ಈ ಮಠಕ್ಕೆ ದಾನ ನೀಡಿದ್ದಾಗಿ ಕ್ರಿ.ಶ.1631ರ ತಾಮ್ರಶಾಸನ[9] ಮಾಹಿತಿ ನೀಡುತ್ತದೆ.

ಮೇಗಣಗವಿ ಮಠದ ವೀರಭದ್ರ ದೇವರಿಗೆ ಬೃಹತ್ ಘಂಟೆಗಳನ್ನು ಸಮರ್ಪಿಸಲಾಗಿದೆ. ದಳವಾಯಿ ನಂಜರಾಜಯ್ಯ ಅರಸೀರವರು[10] ಮತ್ತು ಹಂಚಿಪುರದ ಕೆಂಪುನೂಲು ಸಾಂತಪ್ಪನವರ ಕೊಮಾರು ವೀರಪ್ಪಮಲೆಯಪ್ಪನು ಭಕ್ತಿಪೂರ್ವಕವಾಗಿ ಘಂಟೆಯನ್ನು ಮಠಕ್ಕೆ ಸಮರ್ಪಿಸಿದ್ದಾರೆ.[11] ಮುಮ್ಮಡಿ ಕೃಷ್ಣರಾಜ ಒಡೆಯರವರು ಶಿವಗಂಗೆಗೆ ಬೇಟಿ ನೀಡಿದ್ದಾಗ ಮೇಗಣಗವಿ ಮಠಕ್ಕೆ ಬಂದು ಸ್ವಾಮಿಗಳ ಆಶೀರ್ವಾದ ಪಡೆದು ಕಂಚಿನ ತೀರ್ಥದ ಬಟ್ಟಲು ಮತ್ತು ಹಿತ್ತಾಳೆಯ ದೊಡ್ಡ ತಪ್ಪಲೆಯನ್ನು ನೀಡಿದ್ದಾರೆ.

ಮೇಗಣಗವಿ ಮಠದ ಉತ್ತರ ಗದ್ದುಗೆ ಮಂಟಪದ ನೈರುತ್ಯ ಕಂಭದ ಮೇಲೆ ತೊಟಲಿಕೆರೆ ಚೆಂನಪ್ಪಯ್ಯನ ಮಗ ನಿರುವಣ ಮಾಡಿಸಿದ ಗದ್ದಿಗೆ ಮಂಟಪ ಸೇವೆ[12] ಎಂಬ ಶಾಸನವಿದೆ. ಹೀಗೆ ಮಠ ಕಾಲಕಾಲಕ್ಕೆ ಅಭಿವೃದ್ಧಿಯಾಗುತ್ತಾ ಬಂದಿದ್ದು, 26 ಸ್ವಾಮಿಗಳು ಸೇವೆ ಸಲ್ಲಿಸಿದ್ದಾರೆ. ಕ್ರಿ.ಶ.1751ರ ನಂತರ ಶಿವಗಂಗೆ ಪೇಟೆ ಬೀದಿಯ ಮೆರವಣಿಗೆ ಕುರಿತು ವೀರಶೈವ ಮಠಗಳಿಗೂ ಶಾರದಾ ಮಠಕ್ಕೂ ಜಗಳವಾಗಿ 2 ಶತಮಾನಗಳ ಕಾಲ ಮಠ ಸಂಕಷ್ಟದಲ್ಲಿತ್ತು. ಕಾಲಕ್ರಮೇಣ ಬೆಟ್ಟದ ಮೇಲೆ ವಾಸ ಕಷ್ಟವೆಂದು ಬೆಟ್ಟದ ಬುಡದಲ್ಲಿನ ಮೇಗಣಗವಿ ಪಾಳ್ಯದಲ್ಲಿ ವಿಶಾಲವಾದ ಸುಸಜ್ಜಿತ ಮಠ ಸ್ಥಾಪಿಸಲಾಗಿದೆ. ಇದಲ್ಲದೆ ಈ ಮಠವು ಶಿಕ್ಷಣ ಕ್ಷೇತ್ರದಲ್ಲಿಯೂ ತನ್ನ ಸೇವೆ ಸಲ್ಲಿಸುತ್ತಿದ್ದು STRS ಎಂಬ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿದೆ. ಹೊಸಕೋಟೆ ತಾಲೂಕಿನಲ್ಲಿ ಬಾಲಕಿಯರ ಪ್ರೌಢಶಾಲೆ ಸ್ಥಾಪಿಸಲಾಗಿದೆ. ಶಿವಗಂಗೆಯ ಪ್ರದೇಶದಲ್ಲಿ ವಿಶ್ವಾರಾಧ್ಯ ಗ್ರಾಮಾಂತರ ಪ್ರೌಢಶಾಲೆಗಳು ಇಂದಿಗೂ ನಡೆಯುತ್ತಿವೆ.

**ಕೆಳಗಣ ಗವಿಮಠ ಅಥವಾ ಹೊನ್ನಂಗವಿ ಮಠ**

ಹೊನ್ನಾದೇವಿ ಅಥವಾ ಸ್ವರ್ಣಾಂಭ ದೇವಾಲಯಕ್ಕೆ ಹೊಂದಿಕೊಡಂತೆ ಹೊನ್ನಂಗವಿ ಮಠವಿದೆ. ಇದನ್ನು ಅದೋಗುಹಾ ಮಠವೆಂತಲೂ ಕರೆಯುತ್ತಾರೆ. ಜಗದ್ಗುರು ಶ್ರೀ ಮರುಳಸಿದ್ದರು ಅಥವಾ ದಾರುಕಾಚಾರ್ಯರು ಈ ಮಠ ಸ್ಥಾಪಿಸಿದರೆಂಬುದು ನಂಬಿಕೆ. ಕ್ರಿ.ಶ.1545ರ ವಿಜಯನಗರ ಅರಸು ಸದಾಶಿವರಾಯನ ಶಾಸನದಲ್ಲಿ "ಹೊನ್ನಮ್ಮನ ಸಿಂಹಾಸನದ ಮಹತ್ತಿಗೆ ಪುರಗಳು" ಎಂಬ ಸ್ಪಷ್ಟ ಉಲ್ಲೇಖವಿದೆ.[13] ಹೊನ್ನಾದೇವಿ ಅಮ್ಮನವರ ದೇವಾಲಯದ ಗರ್ಭಗುಡಿಯ ಪಕ್ಕ ಸಣ್ಣ ಗರ್ಭಗುಡಿ ಇದೆ. ಈ ಗರ್ಭಗುಡಿಯ ಮಧ್ಯೆ ಖಾಲಿ ಪಾಣಿಪೀಠವಿದೆ. ಇದು ಹೊನ್ನಮ್ಮ ಗವಿಮಠ ಪರಂಪರೆಯ ಆದ್ಯ ಗುರುವಿನ ಗದ್ದುಗೆಯಿರಬಹುದು. ಇಲ್ಲಿ ಪಾದೋದಕ ಪ್ರಸಾದ ಸೇವೆ ಚಾಲ್ತಿಯಲ್ಲಿದೆ.

---

[7] ಬಿ.ಎಲ್.ರೈಸ್, (1905), ಎಫಿಗ್ರಾಫಿಯಾ ಕರ್ನಾಟಿಕ ಸಂಪುಟ–9, , ಮೈಸೂರು ಸರ್ಕಾರ ಕೇಂದ್ರೀಯ ಮುದ್ರಣಾಲಯ, ಬೆಂಗಳೂರು, Db-40, AD-1545

[8] B.L.Rice, Epigraphy Carnatica, Vol-VIII, 1904, ತೀರ್ಥಹಳ್ಳಿ-97, AD-1631, Mysore Government Central Press, Bangalore.

[9] ಮೇಲಿನದೇ, ತೀರ್ಥಹಳ್ಳಿ-58 AD-1616

[10] ಅಡಿಟಿಪ್ಪಣಿ–151, NL-76 AD-1760

[11] ಮೇಲಿನದೇ, NL-77 AD-1760

[12] ಬಿ.ಎಲ್.ರೈಸ್, (1905), ಎಫಿಗ್ರಾಫಿಯಾ ಕರ್ನಾಟಿಕ ಸಂಪುಟ–9, , ಮೈಸೂರು ಸರ್ಕಾರ ಕೇಂದ್ರೀಯ ಮುದ್ರಣಾಲಯ, ಬೆಂಗಳೂರು, NL-138, ಅನುಬಂಧ

[13] ಬಿ.ಎಲ್.ರೈಸ್, (1905), ಎಫಿಗ್ರಾಫಿಯಾ ಕರ್ನಾಟಿಕ ಸಂಪುಟ–9, , ಮೈಸೂರು ಸರ್ಕಾರ ಕೇಂದ್ರೀಯ ಮುದ್ರಣಾಲಯ, ಬೆಂಗಳೂರು, NL-81, AD-1545

ದೇವಾಲಯಕ್ಕೆ ಹೊಂದಿಕೊಂಡಂತೆ ಇರುವ ಹೊನ್ನಾಂಗವಿ ಮಠವು ಭವ್ಯ ಕಟ್ಟಡವಾಗಿದ್ದು, ಬೃಹತ್ ಮಹಾದ್ವಾರ, ವಿಶಾಲ ಹಜಾರ, ಶಿವಪೂಜಾ ಗೃಹ, ಎಡೆಮನೆ, ದಾಸೋಹ ನಿಲಯ ಗುರುಗಳ ವಿಶ್ರಾಂತಿ ನಿಲಯವನ್ನು ಹೊಂದಿದೆ. ಇಲ್ಲಿ ಹೊಕ್ಕಳಕ್ಕಿ ಆರತಿ ಸೇವೆ, ಮಡೆಸೇವೆ, 16 ಸೇರು ಅಕ್ಕಿಯ ಒಂದೇ ಆರತಿಯ ಅಚ್ಚನ್ನು ಮಾಡಿ ಗುರುಗಳ ಶಿವಪೂಜಾ ನಂತರ ಪದೋದಕ ಪ್ರಸಾದವನ್ನು ಆರತಿಗೆ ಅರ್ಪಿಸಿ, ಮಂಗಳವಾದ್ಯ ಸಮೇತ ತೆಗೆದುಕೊಂಡು ಹೋಗಿ ಬೆಳಗುವಂತಹ ಪಾದೋದಕ ಸೇವೆ ಪರಂಪರೆಯೂ ಇಲ್ಲಿ ಆಚರಣೆಯಲ್ಲಿದೆ.

ಈ ಮಠಕ್ಕೆ ಪ್ರಮುಖ ನೀರಿನ ಆಸರೆ ಎಂದರೆ ಪಾತಾಳಗಂಗೆ. ಇಲ್ಲಿ ಹಲವಾರು ಗದ್ದುಗೆಗಳಿವೆ. ಈ ಮಠವು ಹಲವು ಆರ್ಥಿಕ ಸಂಕಷ್ಟಗಳಿಗೆ ಒಳಗಾಗಿದ್ದಾಗ ಸಿದ್ದಗಂಗಾಮಠದ ಸಹಾಯದಿಂದ ಅಭಿವೃದ್ಧಿಯಾಯಿತು. ಶ್ರೀರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ವಹಿಸಿಕೊಂಡ ನಂತರ ಪಾತಾಳಗಂಗೆಯ ಜೀರ್ಣೋದ್ಧಾರ, ಬೆಟ್ಟದ ಮೇಲಿನ ಮೂಲ ಮಠದ ಜೀರ್ಣೋದ್ಧಾರ, ಶ್ರೀ ರಾಚೋಟ ವೀರಭದ್ರಸ್ವಾಮಿ ದೇವಾಲಯದ ದುರಸ್ಥಿ, ಜಾತ್ರಾ ಸಮಯದಲ್ಲಿ ಹೊನ್ನಾದೇವಿ ಪಲ್ಲಕ್ಕಿ ಉತ್ಸವ, ತಪೋತ್ಸವ ಆಚರಣೆಗಳನ್ನು ಭಕ್ತಾಧಿಗಳ ಸಹಾಯದಿಂದ ನೆರವೇರಿಸಲಾಯಿತು.

**ಕಂಬಾಳು ಮಠ**

ಊರಿನ ಹೊರಭಾಗದಲ್ಲಿ ಕೆರೆಯ ಹತ್ತಿರ ವಿಶಾಲವಾದ ಸ್ಥಳದಲ್ಲಿ ಈ ಮಠವಿದೆ. ಶ್ರೀಮರುಳಸಿದ್ದೇಶ್ವರರು ಈ ಮಠದ ಕತೃಗಳು. ಈ ಮಠವು ಪ್ರಾಚೀನವಾದುದಾಗಿದ್ದು, ಮಠದ ಪ್ರಥಮ ಉಲ್ಲೇಖ ಶಿವಗಂಗೆ ಬೆಟ್ಟದ ಮಹಾದ್ವಾರದ ಪೂರ್ವಕ್ಕೆ ನೆಟ್ಟಿರುವ ಪುರಧರ್ಮ ಶಾಸನದಲ್ಲಿ ಉಲ್ಲೇಖಗೊಂಡಿದೆ. ಈ ಶಾಸನವು ವಿಜಯನಗರ ಅರಸ ಸದಾಶಿವ ಮಹಾರಾಯರ ಕಾಲಕ್ಕೆ ಸೇರಿದೆ. ಅವರ ಅಮರನಾಯಕತ್ವಕ್ಕೆ ಸಂಬಂಧಿಸಿದ ಭಂಡಿಯ ಬಸವಣ್ಣನಾಯಕರು, ಗೂಳೂರು ಮಣ್ಣೆಸೀಮೆಗೆ ಸೇರುವ ಶಿವಗಂಗೆಯ ಗಂಗಾಧರೇಶ್ವರ, ಹೊನ್ನಾದೇವಿ, ಮೇಲಣಗವಿಮಠ, ಚಿನ್ನದ ಕಂಥೆಯ ಮಠ, ಧರ್ಮದ ಗವಿಮಠ, ಬಯಲು ಬಸವಪುರಿ ಮತ್ತು ಕಂಬಾಳು ಮರುಳಸಿದ್ದೇಶ್ವರ ಮಠ ಈ ಎಲ್ಲಾ ಮಠಗಳಿಗೂ ಸೇರಿ ಈ ಪುರಧರ್ಮ ಶಾಸನವನ್ನು[14] ನೀಡಿದ್ದಾರೆ. ಸಾಳುವ ನರಸಿಂಗರಾಯನ ಕಾಲಕ್ಕೆ ಸೇರಿದ ಮತ್ತೊಂದು ಶಾಸನದಲ್ಲಿ ಈ ಉಲ್ಲೇಖವಿದೆ. ಮತ್ತೊಂದು ಶಾಸನದಲ್ಲಿ ಈ ಮಠದಲ್ಲಿ ಚೆನ್ನವೀರದೇವರು ಮಠಾಧಿಪತಿಗಳಾಗಿದ್ದಾಗ ದಾನ ನೀಡಿದ್ದಾರೆ.[15]

ಮುಮ್ಮಡಿ ಕೃಷ್ಣರಾಜ ಒಡೆಯರವರು ದಿನಾಂಕ 11ನೇ ಆಗಸ್ಟ್ 1818ರಲ್ಲಿ ಕಂಬಾಳು ಮಠಕ್ಕೆ ಧರ್ಮದಾಸೋಹಕ್ಕೆ ಅಗತ್ಯವಾದ ಖರ್ಚುಗಳಿಗಾಗಿ ಏನಾದರೂ ಅಗತ್ಯವಿದ್ದಲ್ಲಿ ಅದನ್ನು ಹರಕೆ ಮಾಡಿಕೊಳ್ಳಬೇಕೆಂದು ಕೇಳಿ ಆಗ ಕಂಬಾಳು ಮಠದ ಅಧಿಪತಿಗಳಾಗಿದ್ದ ಚೆನ್ನಬಸವಯ್ಯನವರಿಗೆ ದಾನ ನೀಡಿರುವುದನ್ನು ಒಂದು ನಿರೂಪದಲ್ಲಿ ದಾಖಲಿಸಿದ್ದಾರೆ.

**ಬಯಲು ಮಠ**

ಶಿವಗಂಗೆ ಬೆಟ್ಟದ ಪೂರ್ವದಲ್ಲಿ ಇರುವ ವಿರಕ್ತಮಠ. ವೀರಶೈವ ಪರಂಪರೆಯಲ್ಲಿ ಆಚಾರ್ಯ ಮತ್ತು ವಿರಕ್ತ ಪೀಠಗಳು ಎರಡು ಕಣ್ಣುಗಳಿದ್ದಂತೆ. ಮೇಗಣಗವಿ ಮಠಕ್ಕಿಂತ ಸ್ವಲ್ಪ ಕೆಳಭಾಗದಲ್ಲಿ ಈ ಮಠವಿದೆ. ಸದಾಶಿವರಾಯನ ಶಾಲಿವಾಹನ ಶಕೆ 1466 ಶಾಸನದಲ್ಲಿ ಈ ಮಠದ ಉಲ್ಲೇಖವಿದೆ. ಧರ್ಮದ ಗವಿಯಪುರ ಬಯಲು ಬಸವನ ಗವಿಯಪ್ಪರ ಎಂಬ ಸ್ಪಷ್ಟ ಉಲ್ಲೇಖವಿದೆ. ಈ ಮಠದ ದ್ವಾರದಲ್ಲಿ ನಾಲ್ಕು ಕಂಭಗಳ ಕಲ್ಲಿನ ಮಂಟಪವಿದ್ದು,

---

[14] ಬಿ.ಎಲ್.ರೈಸ್, (1905), ಎಫಿಗ್ರಾಫಿಯಾ ಕರ್ನಾಟಿಕ ಸಂಪುಟ–9, , ಮೈಸೂರು ಸರ್ಕಾರ ಕೇಂದ್ರೀಯ ಮುದ್ರಣಾಲಯ, ಬೆಂಗಳೂರು, NL-81 AD-1545

[15] ಮೇಲಿನದೇ, NL-45, AD-1744

ಈ ಮಠದ ಕರ್ತೃ ಗದ್ದುಗೆ ಇರುವ ಮಠ ಸ್ವಲ್ಪ ಎತ್ತರವಾಗಿದೆ ಮತ್ತು ಪಶ್ಚಿಮಾಭಿಮುಖವಾಗಿದೆ. ಗುರುಮಠ ಸ್ವಲ್ಪ ತಗ್ಗಿನಲ್ಲಿದೆ. ಈ ಕರ್ತೃ ಗದ್ದುಗೆ ಮೇಲೆ ನಾಲ್ಕು ಅಡಿ ಎತ್ತರದ ವೃಷಭನನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ಬಯಲು ಮಠದ ಹೊರಭಾಗದಲ್ಲಿ ಮತ್ತೊಂದು ಒಂದು ಅಂಕಣದ ಗದ್ದುಗೆ ಮಂಟಪವಿದ್ದು, ಇದರ ಪಕ್ಕ ತೋಂಟದ ಸಿದ್ದಲಿಂಗೇಶ್ವರರ ಮತ್ತೊಂದು ಗದ್ದುಗೆ ಇದೆ. ಇದು ವಿಶಾಲವಾದ ಗವಿಯ ಮಧ್ಯೆ ಇದೆ. ಈ ಮಠದ ಪರಂಪರೆಯವರು ಇದನ್ನು ತೋಂಟದ ಸಿದ್ಧೇಶ್ವರರು ಅನುಷ್ಠಾನ ಮಾಡಿದ ಗವಿ ಎಂದು ಹೇಳುತ್ತಾ ಬಂದಿದ್ದಾರೆ. ಇದನ್ನೇ ಮೊದಲು ಬಯಲುಮಠ ಎಂದು ಕರೆಯುತ್ತಿದ್ದರು. ಈ ಮಠದ ಪರಂಪರೆ ಬಹಳ ದಿನದಿಂದ ನಿಂತುಹೋಗಿದ್ದು, ಇಂದು ಗೃಹಸ್ಥ ಜಂಗಮರು ಈ ಮಠ ನಡೆಸುತ್ತಿದ್ದಾರೆ.

**ಕರಿಯಾನೆ ಮಠ**

ಮೇಲಣಗವಿ ಮಠದ ಆಡಳಿತಕ್ಕೆ ಒಳಪಟ್ಟಿರುವ ಈ ಮಠ ಶಿವಗಂಗೆ ಪ್ರವೇಶಿಸಲು ಇರುವ ರಾಜಗೋಪುರದ ಬಲಭಾಗದಲ್ಲಿ ಇದೆ. ಈ ಮಠದ ಗರ್ಭಗುಡಿಯಲ್ಲಿ ಶಿವಯೋಗಿಯ ಸಮಾಧಿ ಇದ್ದು, ಅದರ ಮೇಲೆ ವೃಷಭನನ್ನು ಪ್ರತಿಷ್ಠಾಪಿಸಲಾಗಿತ್ತು. ಮಠದ ಹಿಂಭಾಗದಲ್ಲಿ ಕಲ್ಲಿನ ಗದ್ದುಗೆಯ ಮಂಟಪವಿದ್ದು, ಅದು ಈ ಮಠದ ಪರಂಪರೆಯಲ್ಲಿ ಬಂದ ಸ್ವಾಮಿಗಳ ಗದ್ದುಗೆ ಇರಬಹುದು ಎಂದು ಇಲ್ಲಿನ ಜನ ಅಭಿಪ್ರಾಯಪಡುತ್ತಾರೆ.

**ಶಿವಗಂಗೆ ಗಂಗಾಧರ ದೇವರ ಮಹಂತಿಯ ಸಿಂಹಾಸನ ಮಠ**

ಗಂಗಾಧರೇಶ್ವರ ಲಿಂಗವಿರುವ ಗವಿಯಲ್ಲೇ ಈ ಮಠವಿದ್ದು, ಸುಮಾರು 300 ವರ್ಷಗಳ ಕೆಳಗೆ ಈ ಮಠದ ಪರಂಪರೆ ನಿಂತುಹೋಗಿದೆ. ಒಂದು ಕಾಲದಲ್ಲಿ ಬಹಳ ಪ್ರಾಮುಖ್ಯತೆ ಪಡೆದಿದ್ದ ಈ ಮಠದ ಕುರುಹುಗಳು ಗಂಗಾಧರನ ದೇವಾಲಯದಲ್ಲಿ ಕಾಣಸಿಗುತ್ತವೆ. ಕ್ರಿ.ಶ.1374 ಮತ್ತು ಕ್ರಿ.ಶ.1544ರ ಶಾಸನಗಳಲ್ಲಿ ಈ ಮಠದ ಉಲ್ಲೇಖವಿದೆ.

ಈ ಪ್ರಮುಖ ಮಠಗಳಲ್ಲದೆ ಊರಿನ ಹೆಬ್ಬಾಗಿಲ ಬಳಿ ಇರುವ ಬೆಂಡೆಕೆರೆ ಮಠ, ಪೇಟೆ ಬೀದಿಯಲ್ಲಿನ ದೇಶಿಮಠ, ಭೃಂಗಿ ಮಠ, ಕ್ರಿ.ಶ.1544ರ ಸದಾಶಿವರಾಯನ ಸರ್ವಧರ್ಮ ಶಾಸನದಲ್ಲಿ ಉಕ್ತವಾಗಿರುವ ಚಿನ್ನದ ಕಂಥೆ ಮಠ, ರಾಜಕೋಟೆ ವೀರಭದ್ರ ದೇವಾಲಯದ ಹಿಂಬದಿಯಲ್ಲಿನ ವಿಶಾಲವಾದ ಮಹತ್ತಿನ ಮಠ, ಮುದ್ದುವೀರೇಶ್ವರ ದೇವಾಲಯಕ್ಕೆ ಹೋಗುವ ದಾರಿಯಲ್ಲಿನ ವೃಷಭಮುಖ ತೀರ್ಥಮಠ, ಮುದ್ದುವೀರೇಶ್ವರ ಮಠ, ಮೇಗಣಗವಿ ಮಠದ ಪೂರ್ವದ ತಗ್ಗಿನಲ್ಲಿರುವ ರೇವಣ ಸಿದ್ದೇಶ್ವರ ಮಠ, ಕಮಲತೀರ್ಥದ ಹತ್ತಿರದ ಮಠ, ಪೇಟೆಬೀದಿ ಮಧ್ಯದ ಕಾರಂಜಿ ಮಠ, ಬಳೇರ ಮಠ, ವೀರರಾಜಮ್ಮನ ಮಠ, ಪಟ್ಟದ ದೇವರ ಪಾಳ್ಯದ ಮಠ, ಫಲಹಾರ ಮಠ, ಗಂಗಾತೀರ್ಥದ ಬಳಿಯ ಕಬ್ಬಿಣದ ಕಂತೆ ಮಠ, ಮೈಥಿಲೇಶ್ವರ ತೀರ್ಥದ ಹತ್ತಿರ ಇರುವ ಮಠ, ಕಂಬಾಳು ಊರಿನ ಮುಂಭಾಗದ ಕಂಬಾಲು ಒಪ್ಪತ್ತಿನ ಮಠ, ಕಂಬಾಲು ಗ್ರಾಮದ ಮಠ, ಕಂಬಾಳು ರಸ್ತೆಯ ಬಲಬದಿ ಸಣ್ಣಗುಡ್ಡದ ಮಠ, ಬಸವಪಟ್ಟಣದ ಬೋಳಬಸವೇಶ್ವರ ಮತ್ತು ಹುಚ್ಚ ಬಸವೇಶ್ವರ ಮಠಗಳನ್ನು ಕಾಣಬಹುದು.

ಹೀಗೆ ನೆಲಮಂಗಲ ತಾಲೂಕಿನ ನೂರಹತ್ತು ಮಠಗಳಲ್ಲಿ ಹತ್ತು–ಹನ್ನೆರಡು ಮಾತ್ರ ತಮ್ಮ ಅಸ್ಥಿತ್ವ ಉಳಿಸಿಕೊಂಡಿವೆ. ಈ ಮಠಗಳಲ್ಲಿ ಮೂರು–ನಾಲ್ಕು ಮಠಗಳು ಮಾತ್ರ ಸಮುದಾಯದ ಬೆಳವಣಿಗೆ, ಶೈಕ್ಷಣಿಕ ಕ್ಷೇತ್ರ, ಧಾರ್ಮಿಕ ಆಚರಣೆಗಳಲ್ಲಿ ಪ್ರಭಾವಶಾಲಿಯಾಗಿವೆ. ಬಹಳಷ್ಟು ಮಠಗಳು ಭಕ್ತರ ನಂಬಿಕೆಯ ಆಧಾರದ ಮೇಲೆ ಅಸ್ಥಿತ್ವದಲ್ಲಿವೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯೇ ಶೈವಧರ್ಮ, ಶೈವ ದೇವಾಲಯಗಳು, ಶೈವ ಮಠಗಳ ಬೆಳವಣಿಗೆಯಲ್ಲಿ ನೆಲಮಂಗಲ ಮುಂಚೂಣಿಯಲ್ಲಿದೆ. ಇಲ್ಲಿನ ಶೈವಧರ್ಮದ ಬೆಳವಣಿಗೆಗೆ ದಕ್ಷಿಣ ಕಾಶಿ

ಎಂದು ಜನಪ್ರಿಯತೆ ಪಡೆದಿರುವ ಶಿವಗಂಗೆಯ ಕೊಡುಗೆ ಅಪಾರ. ಈ ಜಿಲ್ಲೆಯಲ್ಲಿಯೇ ಅತಿಹೆಚ್ಚು ದೇವಾಲಯಗಳು ಈ ತಾಲೂಕಿನಲ್ಲಿವೆ. ಗಂಗರಿಂದ ಮೈಸೂರು ಒಡೆಯರವರೆಗೂ ಮತ್ತು ನಂತರದಲ್ಲೂ ಶೈವ ದೇವಾಲಯಗಳು ಬೆಳವಣಿಗೆಯಾಗಿವೆ. ನೆಲಮಂಗಲ ತಾಲೂಕಿನಲ್ಲಿ ಇಂದಿಗೂ ಅತಿಹೆಚ್ಚು ಶೈವ ಮಠಗಳು ಕಾರ್ಯನಿರ್ವಹಿಸುತ್ತಿವೆ.

**ಆಕರ ಗ್ರಂಥಗಳು**

**ಪ್ರಾಥಮಿಕ ಆಕರಗಳು**


- *Annual Report of the Mysore Archeological Department, Survey of Mysore*, MAR, 1902-1942, The Government Press.
- B.Lewis Rice. (1905). *Epigraphia Carnatica-IX and Supplementary*. Mysore Government Central Press.
- Suryanath U Kamath. (1989). *Bangalore Rural District Gazetteer*. Government of Karnataka.
- Suryanath U Kamath. (1989). *Karnataka State Gazetteer*. Government of Karnataka Publication.


**ಕ್ಷೇತ್ರಕಾರ್ಯ**

- ಕವಾಡಿ ಮಠ, ನೆಲಮಂಗಲ, ದಿನಾಂಕ 15–05–2016 & 22–08–2025

**ಸಂದರ್ಶನಗಳು**

- ಗಂಗರಾಜು, ಟ್ರಸ್ಟಿ, ಕವಾಡಿ ಮಠ, ನೆಲಮಂಗಲ, ದಿನಾಂಕ 15–05–2016 & 22–08–2025
- ಗೋಪಾಲರಾವ್, ಹೆಚ್.ಎಸ್, ಶಾಸನತಜ್ಞರು, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ದಿನಾಂಕ 27, 28 ಮತ್ತು 29ನೇ ಮೇ 2022

**ಅನುಷಂಗಿಕ ಆಕರಗಳು**


- ಬಸವ ಪ್ರಭೆ (ಸ್ಮರಣ ಸಂಚಿಕೆ). (1998). ಶ್ರೀ ಪವಾಡ ಬಸವಣ್ಣದೇವರ ಮಠ.
- ಚಂದ್ರಶೇಖರ ನಾರಾಯಣಪುರ. (2002). *ಕರ್ನಾಟಕದ ವೀರಶೈವ ಮಠಗಳು.* ಸಂ–1, ಗೆಳೆಯ ಪ್ರಕಾಶನ.
- ಶಿವಗಂಗಾ ಸಿರಿ(ಸ್ಮರಣ ಸಂಚಿಕೆ). *ಶಿವಗಂಗಾ ಕ್ಷೇತ್ರೋತ್ಸವ ಸಮಿತಿ.* ಮೇಗಣ ಗವಿ ಮಠ.
- ಅರುಣಾ ಕುಮಾರಿ, ಬಿ. (2014). ಶ್ರೀ ಶಿವಗಂಗಾ ಕ್ಷೇತ್ರ. (ಪಿಎಚ್.ಡಿ ಮಹಾಪ್ರಬಂಧ) ಇತಿಹಾಸ ವಿಭಾಗ, ಮೈಸೂರು ವಿಶ್ವವಿದ್ಯಾಲಯ.